

ಸಂಪಾದಕೀಯ

# ಕಥೆಗಳ ಮಹಾಪ್ರಪಂಚ

‘‘ಏನು ಓದುತ್ತಿದ್ದೀಯಾ, ಮಗೂ?’’

‘‘ಕಥೆ ಪುಸ್ತಕ ಓದುತ್ತಿದ್ದೇನೆ, ತಾತ!’’

‘‘ಯಾವ ಕಥೆ ಅದು?’’

‘‘ಪಂಚತಂತ್ರದ ಕಥೆ, ತುಂಬಾ ಚೆನ್ನಾಗಿದೆ’’

‘‘ಸರಿಯಪ್ಪ, ಓದು.... ಒಳ್ಳೇ ಪುಸ್ತಕ ಓದಬೇಕು.’’

ಇಂತಹ ಮಾತುಕತೆಗಳನ್ನು ಇತ್ತೀಚೆಗೆ ಕೇಳಲಾರೆವು. ಕಥೆ ಹೇಳುವ, ಕೇಳುವ ಅಥವಾ ಓದುವ ಹವ್ಯಾಸ ಎಲ್ಲೆಡೆ ಮರೆಯಾಗುತ್ತಿವೆ. ಮಕ್ಕಳನ್ನು ಡಾಕ್ಟರ್, ಇಂಜಿನಿಯರ್ ಕಲಿಸಿ ದುಡಿಯುವ ಯಂತ್ರಗಳನ್ನಾಗಿಸುವ ಭರದಲ್ಲಿ, ಅವುಗಳ ಬೆಳವಣಿಗೆಗೆ ಕಲ್ಪನೆಯ ಗರಿಗೆದರುವ ಕಥೆಗಳಿಂದ ವಂಚಿತರನ್ನಾಗಿಸುತ್ತಿದ್ದೇವೆ. ಬಾಲ್ಯದಲ್ಲಿ ಸರಳ, ಸುಂದರ ಕಥೆ ಪುಸ್ತಕಗಳನ್ನು ಓದಿ ಬಲ್ಲವರಿಗೆ ಗೊತ್ತಿದೆ — ತಮ್ಮ ಮುಂದಿನ ಸುದೀರ್ಘ ಜೀವನದುದ್ದಕ್ಕೂ ಆ ಕಥೆಗಳು ಎಷ್ಟೊಂದು ಪ್ರಭಾವವನ್ನು ಬೀರಿವೆ ಎಂದು.

## ಕಥೆಗಳ ರೋಚಕ ಜಗತ್ತು

ಬಾಲ್ಯವೇ ಹಾಗೆ, ಕಣ್ಣುಗಳನ್ನು ಅರಳಿಸುತ್ತ ಅಜ್ಜ-ಅಜ್ಜಿಯಂದಿರು ಹೇಳುವ ಅಚ್ಚರಿಯ ಕಥೆಗಳಿಗೆ ಕಿವಿಗೊಟ್ಟು, ಎದೆತೆರೆದು ಆಲಿಸುತ್ತೇವೆ. ಕಥೆಗಳ ಮಾಯಾಲೋಕದ ಕಲ್ಪನೆಯೊಂದಿಗೆ ನಮಗರಿವಿಲ್ಲದೆ ಅನೇಕ ನೈತಿಕ, ಮೌಲಿಕ ಆದರ್ಶಗಳು ನಮ್ಮ ಅರಿವಿನ ಆಳಕ್ಕಿಳಿಯುತ್ತವೆ. ಪಂಚತಂತ್ರ, ಈಸೋಪನ ಕಥೆಗಳು, ‘ಚಂದಮಾಮ’ದಂಥ ಪತ್ರಿಕೆಗಳು, ಸಾಹಸಿಗಳ ಚಿತ್ರ ಕಥೆಗಳು ಕೇವಲ ಮಕ್ಕಳನಷ್ಟೇ ಅಲ್ಲ, ಹಿರಿಯರನ್ನೂ ಆಕರ್ಷಿಸುತ್ತವೆ. ಶಾಲೆಯ ಅಧ್ಯಾಪಕರೂ ಅನೇಕ ಸಲ ಪಾಠವನ್ನು ಬದಿಗಿಟ್ಟು, ಅತ್ಯಂತ ರಸವತ್ತಾಗಿ, ಹಾವಭಾವಗಳಿಂದ ಅಭಿನಯಿಸುತ್ತ ಕಥೆ ಹೇಳಲು ಹೊರಟರೆ, ವಿದ್ಯಾರ್ಥಿಗಳೆಲ್ಲ ದೇಶಕಾಲ ಮರೆತು ಕಲ್ಲಿನಂತೆ ಕುಳಿತುಬಿಡುತ್ತಾರೆ. ಮಾನವನ ಮನಸ್ಸನ್ನು ಇಷ್ಟೊಂದು ಸೂರೆಗೊಳ್ಳುವ, ಉಳಿದೆಲ್ಲವನ್ನೂ ಮರೆಸಿ ಕೆಲವು ಕಾಲ ಕಥಾಪ್ರಪಂಚದಲ್ಲೇ ತೇಲಾಡಿಸುವ ಈ ಅದಮ್ಯ ಶಕ್ತಿ ಎಲ್ಲಿಂದ ಬಂದಿರಬಹುದು?

—ಈ ಪ್ರಶ್ನೆಗೆ ಉತ್ತರ ಹುಡುಕುತ್ತ ಹೋದಂತೆ ಕಥೆ ಜಗತ್ತು ತನ್ನ ಹಲವು ಪದರಗಳನ್ನು ತೆರೆದು ನಿಲ್ಲುತ್ತದೆ, ಮಾನವನ ಇತಿಹಾಸದಾಚೆ ನಿಂತು ಅನೂಹ್ಯ ಜಗತ್ತಿನೆಡೆಗೆ ಕೈತೋರಿಸುತ್ತದೆ.

## ಕಥೆಗಳ ಸುದೀರ್ಘ ಇತಿಹಾಸ

ಹಿಂದೆ, ಬಹಳ ಹಿಂದೆ, ಇನ್ನೂ ಇತಿಹಾಸ ಇಣುಕಿ ನೋಡಲಾಗದಷ್ಟು ಪ್ರಾಚೀನ ಕಾಲದಲ್ಲಿ ಹಲವಾರು ಕಥೆಗಳು ಪ್ರಚಲಿತವಿದ್ದವು. ಜನರ ಬಾಯಲ್ಲಿ ರಚಿತವಾದ ಕಥೆಗಳು ಒಂದೊಂದು ಜನಾಂಗಗಳ ನಡುವೆಯೂ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದವು. ಸಾಹಿತ್ಯರಚನೆ, ಲಿಪಿಬದ್ಧ ಭಾಷೆಗಳ ಬಳಕೆ ಆರಂಭವಾದಾಗ ಈ ಕಥೆಗಳನ್ನೇ ದಾಖಲಿಸಲಾಯಿತು. ಕಾವ್ಯ, ನಾಟಕ, ಮಹಾಕಾವ್ಯಗಳ ಮೂಲಕ ಹಲವು ಕಥೆಗಳು ಶತಮಾನಗಳನ್ನು ದಾಟಿ ಸುಳಿದುಬಂದವು. ಇನ್ನು ಅನೇಕ ಕಥೆಗಳು ಜನಸಾಮಾನ್ಯರ ಬಾಯಲ್ಲೇ ಹರಿದಾಡಿದವು. ಧಾರ್ಮಿಕ ಹಿನ್ನೆಲೆಯುಳ್ಳ ಪುರಾಣಗಳದೂ ಒಂದು ದೊಡ್ಡ ಸಾಹಿತ್ಯರಾಶಿ. ಸಾವಿರಾರು ಕಥೆಗಳನ್ನು ಒಳಗೊಂಡ ಪುರಾಣಗಳು ಹಲವು ಬಗೆಯಲ್ಲಿ ಜನರ ನಡುವೆ ಹರಿದಾಡಿ ಪ್ರಭಾವ ಬೀರಿದವು. ಬುದ್ಧ, ರಾಮಕೃಷ್ಣ, ವಿವೇಕಾನಂದರಂಥ ಮಹಾತ್ಮರೂ ಕೂಡ ತಮ್ಮ ಉಪದೇಶಗಳ ನಡುವೆ ಸಾಕಷ್ಟು ಕಥೆಗಳನ್ನು ಬಳಸಿಕೊಂಡರು. ಇವೆಲ್ಲ ತಿಳಿಸಿಕೊಡುವ ಅಂಶ ಇದೊಂದೆ : ಕಥೆಗಳಷ್ಟು ಪರಿಣಾಮ ಬೀರುವ ಮಾಧ್ಯಮ ಇನ್ನೊಂದಿಲ್ಲ.

ಇತ್ತೀಚೆಗೆ ಕಥೆಗಳು ಹತ್ತು ಹಲವು ರೂಪಗಳನ್ನು ಪಡೆದು ನಮ್ಮ ನಡುವೆ ಹರಿದಾಡುತ್ತವೆ: ಚಲನಚಿತ್ರ, ಟಿ.ವಿ. ಸೀರಿಯಲ್, ಪತ್ರಿಕೆಗಳಲ್ಲಿ ಧಾರವಾಹಿ, ಅಂಕಣಗಳ ರೂಪದಲ್ಲಿ, ಮೊಬೈಲ್-ಇಂಟರ್ನೆಟ್‌ಗಳಲ್ಲಿ, ಇ-ಪುಸ್ತಕಗಳ ರೂಪದಲ್ಲಿ... ಇತ್ಯಾದಿ. ಆದರೆ ಆಧುನಿಕ ಕಾಲದಲ್ಲಿ ಹಿಂದಿನ ಕಥೆಗಳಿಗಿದ್ದ

ಗಟ್ಟಿತನವಿದೆಯೆ? ಜನರನ್ನು ಅಷ್ಟು ಗಾಢವಾಗಿ ಹಿಡಿದಿಡ ಬಲ್ಲವೆ? ಉತ್ತರ, ಇಲ್ಲವೆಂದೇ ಹೇಳಬೇಕು.

### ಜನಾಂಗದ ಅನುಭವಗಳ ಆಗರ

ಮಾನವನ ಇತಿಹಾಸದುದ್ದಕ್ಕೂ ಕಥೆಗಳು ವಹಿಸಿರುವ ಪಾತ್ರ ವೇನು? ಜನಾಂಗದ ಹಲವು ಅನುಭವಗಳನ್ನು ಅವು ತಮ್ಮ ಉದರದಲ್ಲಿ ಹಿಡಿದಿಡುತ್ತವೆ. ಹೇಳುವವನ, ಕೇಳುವವನ ಮೂಲಕ ಅವು ದಾಟಿಸಲ್ಪಟ್ಟು, ಜನಜೀವನದಲ್ಲಿ ಮತ್ತೆ ಜೀವಂತವಾಗುತ್ತವೆ. ಇಲ್ಲಿ ಕಾಲ್ಪನಿಕ ಕಥೆಗಳು ವ್ಯಕ್ತಿಯೊಬ್ಬನ ಕಲ್ಪನೆ, ಊಹೆಯನ್ನು ಆಧರಿಸಿದ್ದಲ್ಲವೆ? ಸುಳ್ಳಿನ ಮೇಲೆ ನಿಂತಿರುವ ಈ ಕಥೆಗಳು ಜನಾಂಗಕ್ಕೆ, ಸಮಾಜಕ್ಕೆ ಯಾವ ಒಳಿತನ್ನು ನೀಡಬಲ್ಲದು? — ಈ ರೀತಿ ಅಕ್ಷೇಪದ ಮಾತನ್ನು ಆಡಿದವರಿದ್ದಾರೆ. ಇದಕ್ಕೆ ಸೂಕ್ತವಾದ ಉತ್ತರ ಒಂದೇ: ಯಾವ ಕಲ್ಪನೆಯೂ ಶೂನ್ಯದಿಂದ ಹುಟ್ಟುವುದಿಲ್ಲ ; ವ್ಯಕ್ತಿಯೊಬ್ಬನ, ಅಥವಾ ಇತರ ಬೇರೆಯವರ ಅನುಭವವೇ ಕಲ್ಪನೆಯಾಗಿ ಮೂಡುತ್ತದೆ. ಕಥೆಯಲ್ಲಿ ಬರುವ ವ್ಯಕ್ತಿ , ಘಟನೆ, ಸನ್ನಿವೇಶ ಇತ್ಯಾದಿ ವಿವರಗಳು ಕಥೆಕಟ್ಟಿದವನ ಸೃಷ್ಟಿಯಾಗಿರಬಹುದು; ಆದರೆ ತಿರುಳು ಮಾತ್ರ ಅನುಭವಗಮ್ಯ ; ಅದು ಒಂದಲ್ಲ ಒಂದು ರೀತಿಯಲ್ಲಿ ವಾಸ್ತವ. ಸಮಾಜದಲ್ಲಿ ಎಲ್ಲಕ್ಕಿಂತ ಹೆಚ್ಚು ಪ್ರಭಾವ ಬೀರುವುದು ಈ ತಿರುಳು; ಹಾಗೂ ಅದು ಹೊತ್ತೊಯ್ಯುವ ನೈತಿಕ, ಧಾರ್ಮಿಕ ಅಥವಾ ಆಧ್ಯಾತ್ಮಿಕ ಮೌಲ್ಯಗಳು.

ಇತಿಹಾಸವೂ ಒಂದು ಬಗೆಯ ಕಥೆಯೇ; 'ಹಿಂದೆ ಹೀಗಾಯಿತು' ಎಂದು ದಾಖಲೆ, ಆಧಾರ ಸಮೇತ ಹೇಳುವ ಒಂದು ಸುದೀರ್ಘ ಕಥೆ. ಭಾರತದಲ್ಲಿ ಮಹಾಭಾರತ, ರಾಮಾಯಣದಂಥ ಬೃಹತ್ತಾದ ಗ್ರಂಥಗಳು 'ಇತಿಹಾಸ'ವೆಂದು ಕರೆಯಲ್ಪಟ್ಟವು. ಅವು ಕೇವಲ ಕಥೆಗಳಲ್ಲ, ನಡೆದ ಕಥೆಗಳು ಎಂದೇ ಪರಿಗಣಿಸಲಪಟ್ಟವು. ಪಾಶ್ಚಾತ್ಯರಲ್ಲಿ ಹಾಗೂ ಆಧುನಿಕ ವಿಜ್ಞಾನದ ಆವಿಷ್ಕಾರವಾದ ನಂತರ 'ಇತಿಹಾಸ'ವೆಂದರೆ ಅದು ಸತ್ಯಕ್ಕೆ ನಿಷ್ಠವಾದ, ಹಲವು ಆಧಾರಗಳ ಹಿನ್ನೆಲೆಯಲ್ಲಿ ಸತ್ಯವನ್ನೇ ಹೇಳುವ ಒಂದು ಜ್ಞಾನಶಾಖೆಯಾಗಿ ಮಾರ್ಪಟ್ಟಿತು. ಇಲ್ಲಿ ಕಲ್ಪನೆ ಊಹೆಗಳಿಗೆ ಸ್ಥಾನವಿಲ್ಲ; ಈ ಅರ್ಥದಲ್ಲಿ ಭಾರತದ ಪಾರಂಪರಿಕ 'ಇತಿಹಾಸ'ಗಳನ್ನು ಹಾಗೂ ಪುರಾಣಗಳನ್ನು ಈ ಜ್ಞಾನಶಾಖೆಯು ನಿಜವಾದ ಇತಿಹಾಸವೆಂದು ಪರಿಗಣಿಸದೆ, ಕೇವಲ ಕಾಲ್ಪನಿಕ ಕಥೆಗಳೆಂದು ಪರಿಗಣಿಸಿದೆ. ಆದರೆ ಈ ಕಥೆಗಳ ಹಿಂದೆ ನೈಜ ಘಟನೆಗಳೂ ಇದ್ದಿರಬಹುದು; ಆದರೆ ಕಾಲ್ಪನಿಕ ಹಂದರದ ನಡುವೆ ವಾಸ್ತವ ಸಂಗತಿಗಳು ಅಡಗಿ ಹೋಗಿವೆ ಎಂದೇ ಇದನ್ನು ವ್ಯಾಖ್ಯಾನಿಸಲಾಗುತ್ತದೆ.

ಆದರೆ ಇಲ್ಲಿ ಒಂದು ರೋಚಕವಾದ ಸಂಗತಿಯನ್ನು ಗಮನಿಸಬೇಕು: ಸತ್ಯವನ್ನೇ ಆಧರಿಸಿದ, ಸತ್ಯವನ್ನೇ ಹುಡುಕುವ ಹಾಗೂ ದಾಖಲಿಸುವ ಇತಿಹಾಸವಾಗಲಿ, ಕಾಲ್ಪನಿಕ ಚೌಕಟ್ಟಿನ ಆಧಾರದಲ್ಲಿ ಜನರ ನಡುವೆ ಹರಿದಾಡುವ ಹಲವು ಬಗೆಯ ಸಣ್ಣ-ದೊಡ್ಡ ಕಥೆಗಳಾಗಲಿ — ಇವೆಲ್ಲ ಒಂದೊಂದು ಜನಾಂಗದ ಸ್ಫೂರ್ತಿಯ ಕೇಂದ್ರಗಳಾಗಿ ಕೆಲಸ ಮಾಡುತ್ತಿವೆ. ಅಶೋಕ, ರಾಣಾಪ್ರತಾಪ ಸಿಂಹ, ಶಿವಾಜಿಯವರಂಥ ವ್ಯಕ್ತಿಗಳು ನಿಜವಾಗಿಯೂ ಬದುಕಿದ್ದರು; ಅವರು ಜೀವಿಸಿದ್ದಾಗ ಹೇಗೆ ಒಂದೊಂದು ಜನಾಂಗದ ಸ್ಫೂರ್ತಿ ಕೇಂದ್ರಗಳಾಗಿದ್ದರೋ, ಹಾಗೆಯೇ ಇಂದೂ ನಮ್ಮ ದೇಶದಲ್ಲಿ ಹಲವು ಜನರಿಗೆ ಪ್ರೇರಣೆ ನೀಡುತ್ತಿದ್ದಾರೆ. ಆದರೆ ಸತ್ಯ ಹರಿಶ್ಚಂದ್ರ , ಭಗೀರಥ, ಸಾವಿತ್ರಿಯರಂಥ ಪೌರಾಣಿಕ ವ್ಯಕ್ತಿಗಳೂ ನಮ್ಮ ಜನರಿಗೆ ಆದರ್ಶವಾಗಿದ್ದಾರೆ. ಅಂದರೆ, ಕಾಲ್ಪನಿಕವಾಗಲಿ, ಚಾರಿತ್ರಿಕವಾಗಿರಲಿ — ಕಥೆಗಳು ಚಿತ್ರಿಸುವ ಉಚ್ಚ ಆದರ್ಶಗಳು ಜನಾಂಗದಲ್ಲಿ ಬಹುಕಾಲ ಉಳಿಯುತ್ತವೆ. ಈ ಪ್ರೇರಣೆಯೇ ಜನಾಂಗದ ನಿಜವಾದ ಆಸ್ತಿಯಾಗಿದೆ. ಇವುಗಳ ವಾಹಕಗಳಾಗಿ ಕಥೆಗಳು ಹತ್ತು ಹಲವು ರೂಪಗಳಲ್ಲಿ ಉಳಿದುಕೊಳ್ಳುತ್ತವೆ. ಕಥೆಗಳು ಸತ್ಯಕಥೆಯಾದಷ್ಟೂ ಜನರಿಗೆ ಅವು ಆಪ್ತವೆನಿಸುತ್ತವೆ, ಆಪ್ಯಾಯಮಾನವಾಗುತ್ತವೆ ಎಂಬುದೂ ಅಷ್ಟೇ ನಿಜ.

### ಕಥೆಗಳ ಮೂಲರಚನೆ

ಕಥೆಗಳು ಜನರ ಮನಸ್ಸನ್ನು ಗಾಢವಾಗಿ ಆವರಿಸಿ, ಅವರ ಮೇಲೆ ಬಹಳ ದೀರ್ಘಕಾಲ ಪ್ರಭಾವ ಬೀರಲು ಕಾರಣವೇನು? ಕಥೆಗಳ ಮೂಲರಚನೆ ಹೇಗಿದೆ ಎಂಬುದನ್ನು ಗಮನಿಸುವ ಮೂಲಕ ಇದಕ್ಕೆ ಉತ್ತರವನ್ನು ಕಾಣುವ ಪ್ರಯತ್ನ ಮಾಡೋಣ. ಘಟನೆಗಳೇ ಕಥೆಗಳ ಜೀವಾಳ. ಸಾಮಾನ್ಯವಾಗಿ ಜೀವನದಲ್ಲಿ ನಡೆಯುವ ಘಟನೆಗಳು ಏಳು, ಬೀಳುಗಳಿಂದ ಕೂಡಿ ಅನೇಕ ಅನಿರೀಕ್ಷಿತ ಸಂಗತಿಗಳಿಂದ ಕೂಡಿರುತ್ತವೆ. ಕಥೆಗಳಲ್ಲೆಲ್ಲ ಅಸಾಧಾರಣ ಘಟನೆಗಳು ನಡೆಯುತ್ತವೆ; ಹಲವು ಬಾರಿ ಅವು ಅನಿರೀಕ್ಷಿತವಾಗಿರುತ್ತವೆ. ಜನಸಾಮಾನ್ಯರ ಬದುಕಿನಲ್ಲಿ ನಡೆಯುವ ಸಹಜ ಘಟನೆಗಳಿಗಿಂತ ಭಿನ್ನವಾದ, ವಿಚಿತ್ರವಾದ ಅನಿರೀಕ್ಷಿತ ಘಟನೆಗಳು ಇದ್ದುದ್ದರಿಂದಲೇ ಅವು ಜನರ ಗಮನವನ್ನು ವಿಶೇಷವಾಗಿ ಸೆಳೆಯುತ್ತವೆ. ಎರಡನೆಯದಾಗಿ, ಪಾತ್ರಗಳು. ಸಾಮಾನ್ಯವಾಗಿ ವ್ಯಕ್ತಿಗಳಿರುತ್ತಾರೆ; ರಾಜನೋ, ರಾಣಿಯೋ, ರೈತ, ಬ್ರಾಹ್ಮಣ, ಮಂತ್ರವಾದಿ, ಚಿಕ್ಕ ಮಕ್ಕಳು, ಹೆಂಗಸರು, ಎಲ್ಲರೂ ಕಥೆಗಳಲ್ಲಿ ಪಾತ್ರಗಳು. ಆದರೆ ಅಸಾಮಾನ್ಯ ಘಟನೆಗಳನ್ನು ಮುನ್ನಡೆಸುವ ಈ ಪಾತ್ರಗಳೂ ಕಥೆಗಳಲ್ಲಿ ಅಸಾಮಾನ್ಯರಾಗಿ ಬಿಡುತ್ತಾರೆ! ಪಂಚತಂತ್ರ, ಈಸೋಪನ ಕಥೆಗಳಂತಹ ಉದಾಹರಣೆಗಳಲ್ಲಿ ಪ್ರಾಣಿ, ಪಕ್ಷಿಗಳೂ ಪಾತ್ರಗಳಾಗಿವೆ. ಮೂರನೆಯ ಪ್ರಧಾನ ಅಂಶವೇ, ಕಥೆಗಳು ಯಾವ ಸಂದೇಶವನ್ನು ನೀಡುತ್ತವೆ ಎಂಬುದು. ಇವುಗಳೇ ಕಥೆಗಳ ನಿಜವಾದ ತಿರುಳು. ನೈತಿಕತೆ, ಆಧ್ಯಾತ್ಮಿಕತೆ, ಜೀವನಾನುಭವ — ಇವುಗಳೇ ಕಥೆಗಳಲ್ಲಿ ಹೆಚ್ಚಾಗಿ ಕಂಡುಬರುವ ಸಂದೇಶಗಳು; ಆದರೆ ಮನರಂಜನೆಯನ್ನೇ ಗುರಿಯನ್ನಾಗಿಸಿಕೊಂಡ

ಅನೇಕ ಕಥೆಗಳನ್ನು ಸಮಾಜ ಸೃಷ್ಟಿಸುತ್ತವೆ — ಅವು ಜನರ ಅರಿವು, ಅನುಭವಗಳನ್ನು ವಿಸ್ತಾರಗೊಳಿಸುತ್ತವೆ.

### ಜನಜೀವನವೆಂಬ ಪಾಠಶಾಲೆಯಲ್ಲಿ

ಒಟ್ಟು ಮಾನವ ಜೀವನವನ್ನೇ ಒಂದು ದೀರ್ಘವಾದ ಕಥೆಯೆಂದು ಪರಿಗಣಿಸಿದರೆ, ಇಲ್ಲಿ ಮೂಡಿಬಂದಿರುವ ಘಟನೆಗಳೋ, ಪಾತ್ರಗಳೋ ಅಥವಾ ಸನ್ನಿವೇಶಗಳೋ ಅದೆಷ್ಟು! ನಮಗರಿವಿಲ್ಲದಂತೆ ನಾವು ಒಂದಾದ ಮೇಲೊಂದರಂತೆ ನೂರಾರು, ಸಾವಿರಾರು ಕಥೆಗಳ ಮೂಲಕ ಹಾದುಹೋಗುತ್ತಿದ್ದೇವೆ. ನಮ್ಮಂತೆಯೇ ಹಿಂದೆಯೂ ಅಸಂಖ್ಯಾತ ಜನರು ಕಥೆ ಹೇಳಿದರು, ಕೇಳಿದರು; ಕೆಲವರು ಕಥೆ ಕಟ್ಟಿದರು; ಇನ್ನು ಅನೇಕರು ತಾವೇ ಕಥೆಯಾದರು. ಒಂದರ್ಥದಲ್ಲಿ ಇದು ಮುಗಿಯದ ಕಥೆ; ಜೀವನವೆಂಬ ಪಯಣದುದ್ದಕ್ಕೂ ಕಂಡು, ಕೇಳಿ ಎದುರುಗೊಳ್ಳುತ್ತ ಹೋಗುವ ಹಲವು ಕ್ಷಣಗಳ ಸರಮಾಲೆ.

ಈ ಎಲ್ಲ ಕಥೆಗಳ ಮಹಾಪ್ರಪಂಚದಲ್ಲಿ ಕೆಲವು ಕ್ಷಣ ಮನರಂಜನೆ ನೀಡಿ ನಮ್ಮಿಂದ ಮರೆಯಾಗುವ ಕಥೆಗಳು ಅನೇಕ. ಕೆಲವೊಮ್ಮೆ ನಮ್ಮ ಗಮನವನ್ನು ವಿಶೇಷವಾಗಿ ಸೆಳೆದು, ನಮ್ಮ ಅಂತರಂಗವನ್ನು ಕಲಕಿ ಹಲವು ದಿನಗಳ ಕಾಲ ಕಾಡುವ ಕಥೆಗಳು ಕೆಲವು. ಆದರೆ ನಮ್ಮ ಅರಿವಿನ ಆಳಕ್ಕಿಳಿದು, ನಮ್ಮ ಬದುಕಿನ ನೋವು ನಲಿವುಗಳಿಗೆ ಸ್ಪಂದಿಸಿ, ಹೊಸ ಬೆಳಕನ್ನೋ ಹೊಸ ದಾರಿಯನ್ನೋ ತೋರಿಸಿಕೊಡುವ ಕಥೆಗಳು ಬಹಳ ಅಪರೂಪ. ಇದರೊಂದಿಗೆ, ಸಾಮಾನ್ಯ ಬದುಕಿನ ಎಲ್ಲ ಮಜಲುಗಳನ್ನು ಮೀರಿನಿಂತು, ಅನಂತ ಸತ್ಯದ-ಅನಂತ ತತ್ತ್ವದ ಕೆಲವು ಹೊಳಹುಗಳನ್ನು ನಮ್ಮತ್ತ ಬೀರಿ, ನಮ್ಮನ್ನು ಭವ್ಯತೆಯ ಔನ್ನತ್ಯಕ್ಕೇರಿಸುವ ಅತ್ಯಂತ ಅತಿಶ್ರೇಷ್ಠ ಕಥೆಗಳೂ ಇವೆ. ಇವನ್ನು ಯಾರು ಕೇಳುವರೋ ಅವರ ಬದುಕು ಅರಳುತ್ತದೆ; ಅದರ ಸುಗಂಧ ಎಲ್ಲೆಡೆ ವ್ಯಾಪಿಸುತ್ತದೆ. ಆದರೆ ಪಾಪ, ಅನೇಕರು ಇಂಥ ಕಥೆಗಳನ್ನು ಕೇಳುವುದೇ ಇಲ್ಲ.

### ಆಧ್ಯಾತ್ಮಿಕತೆಯ ವಾಹಕಗಳಾಗಿ

ಸಾಧು-ಸಂತರ ಜೀವನದಲ್ಲಿ ಅನೇಕ ಅಪೂರ್ವ ಘಟನೆಗಳು ನಡೆದಿರುತ್ತವೆ. ಅವು ಪುಸ್ತಕಗಳಲ್ಲಿ, ಜನರ ಆಡುಮಾತಿನಲ್ಲಿ ಕಥೆಗಳಾಗಿ ಹರಿದಾಡುತ್ತವೆ. ಬದುಕನ್ನು ಪರಿವರ್ತಿಸುವ, ಜೀವನಕ್ಕೆ ದಾರಿ ತೋರಿಸುವ ಶಕ್ತಿ ಈ ಕಥೆಗಳಿವೆ. ಶ್ರೀರಾಮಕೃಷ್ಣರ ಮಾತುಕಥೆಗಳ ನಡುವೆ ನೂರಾರು, ಸಾವಿರಾರು ಕಥೆಗಳು ಬರುತ್ತವೆ. ಒಂದೊಂದು ಕಥೆಯೂ ಅಸಾಧಾರಣ ಸಂದೇಶವನ್ನು ನಿಡುವ ಅನರ್ಘ್ಯ ರತ್ನವಾಗಿದೆ. ಎಳೆಯ ಮಕ್ಕಳಿಂದ ಹಿಡಿದು, ಯುವಕರಿಗೂ, ಮಹಿಳೆಯರಿಗೂ, ವೃದ್ಧರಿಗೂ ಅತ್ಯಂತ ಆಪ್ತವಾಗಬಲ್ಲ ಇಂಥ ಕಥೆಗಳನ್ನು ನಾವಿಂದು ಹೆಚ್ಚು ಹೆಚ್ಚು ಪ್ರಚುರಪಡಿಸಬೇಕಾಗಿದೆ. ಮನರಂಜನೆಯ, ಶೃಂಗಾರ-ಹಾಸ್ಯಾದಿ ರಸಗಳನ್ನು ಸೂಸುವ ಕಥೆಗಳ ಪ್ರಭಾವಕ್ಕಿಂತ, ಜೀವನ ಸತ್ಯಗಳನ್ನು ತಿಳಿಸಿಕೊಡುವ ಕಥೆಗಳು ನಮಗಿಂದು ಬೇಕಾಗಿವೆ. ಹೊಸ ಹೊಸ ಅಧುನಿಕ ಮಾಧ್ಯಮಗಳು ಬಂದರೆ ಬರಲಿ, ಕಥೆಗಳ ತಿರುಳು ಮಾತ್ರ ಒಂದೇ ಆಗಿರಲಿ — ಅದು ಅತಿ ಶ್ರೇಷ್ಠ ಆದರ್ಶ, ನೀತಿ ಸತ್ಯಗಳನ್ನು ಬಿತ್ತರಿಸುವಂತಿರಲಿ. ಆಗ ಕಥೆಗಳು ಕೇವಲ ಕೇಳಿ ಮರೆಯುವ ಕಥೆಗಳಾಗಿರದೆ, ಮನರಂಜನೆಯೊಂದಿಗೆ ಮನಃಪರಿವರ್ತಕಗಳೂ ಆಗಿ ಕೆಲಸಮಾಡುವ ಮಾಧ್ಯಮವಾಗುವುವು; ತುಸುಕಾಲ ಮನಸ್ಸಿನಲ್ಲಿ ನಿಂತು ರಂಜಿಸಿ ಮರೆಯಾಗುವ ಬದಲು, ಅವು ನಮ್ಮ ಮನಃಪಟಲದಲ್ಲಿ ಸ್ಥಿರವಾಗಿ ನಿಲ್ಲುವುವು.

### ಮಾನವ ಜೀವನದ ಪೋಷಕಗಳಾಗಿ

ಎಲ್ಲರ ಜೀವನವೂ ಒಂದೊಂದು ಕಥೆ; ಅದರಲ್ಲಿ ನಾವು ನೀವುಗಳು ಹೇಳುವ, ಕೇಳುವ ಕಥೆಗಳು ‘ಕಥೆಯೊಳಗೊಂದು ಕಥೆ’ಯಂತೆ — ಕೊನೆಯಿಲ್ಲದ ಜೀವನಚಕ್ರದಲ್ಲಿ ಬಂದು ಬಂದು, ಸುತ್ತಿ ಸುಳಿಯುವ ನೀರಿನ ಸುಳಿಯಂತೆ. ನಿಜಜೀವನದಲ್ಲಿ ಒಂದಿಷ್ಟೂ ಕಣ್ಣೀರು ಸುರಿಸದವರು ನಾಟಕ, ಸಿನಿಮಾ ನೋಡಿ ಕೊಡಗಟ್ಟಲೆ ಕಣ್ಣೀರಿಡುತ್ತಾರೆ; ಅಂತೆಯೇ ನಮ್ಮ ಬದುಕಿನಲ್ಲಿ ಯಾವ ಸಾಹಸ ಮಾಡದಿದ್ದರೂ ಕಥೆ, ಕಾದಂಬರಿಗಳ ನಾಯಕನ ಸಾಹಸವನ್ನು ಮೆಚ್ಚಿ, ಮೇಲಕ್ಕೆ ನೆಗೆದು ಕುಣಿಯುತ್ತೇವೆ. ಈ ವಿಪರ್ಯಾಸವನ್ನೇ ಚಿಂತಕರು ‘ರಸಾಸ್ವಾದ’ವೆಂದು ಕರೆದರು. ಕ್ಷಣಕಾಲವಾದರೂ ಪ್ರಪಂಚವನ್ನು ಮರೆತು, ಕಲ್ಪನೆ, ಮನರಂಜನೆಯ ಲೋಕದಲ್ಲಿ ವಿಹರಿಸಿ ತನ್ನ ಮೈಮನಗಳ ಆರೋಗ್ಯವನ್ನು ಕಾಪಾಡಿಕೊಳ್ಳುವುದು ನಮಗೆ ಅತ್ಯಂತ ಅನಿವಾರ್ಯವಾಗಿದೆ. ಆದ್ದರಿಂದ ಕಲೆ, ಸಾಹಿತ್ಯ, ಸಂಗೀತಗಳು ಜೀವನಕ್ಕೆ ಬಹಳ ಅಗತ್ಯವಾಗಿವೆ. ಆದರೆ ಇವು ಕಟ್ಟಿಕೊಡುವ ಕಾಲ್ಪನಿಕ ಜಗತ್ತು ಒಂದು ಉನ್ನತ ಆದರ್ಶ, ಸತ್ಯ ಹಾಗೂ ಮೌಲ್ಯವನ್ನು ತಿಳಿಸಿಕೊಡಬೇಕು. ಸಮಾದಲ್ಲಿ ಬಿಕ್ಕಟ್ಟು, ಸಂಘರ್ಷ, ಅರಾಜಕತೆ, ಗೊಂದಲ, ಕ್ಲೇಶಗಳನ್ನು ಬಿತ್ತುವಂತಿರಬಾರದು. ಅದಕ್ಕೆ ಬದಲಾಗಿ, ಭಾರತೀಯ ಪದ್ಧತಿಯಂತೆ, ಎಲ್ಲ ಕಲೆ, ಸಾಹಿತ್ಯಗಳೂ ಅಂತರಂಗದ ಚೇತನವನ್ನು ಪಾರಮಾರ್ಥಿಕತೆಯ ಕಡೆಗೆ ಹಿಡಿದೆತ್ತುವ ಗುರಿಯನ್ನು ಹೊಂದಿದ್ದರೆ, ಮನರಂಜನೆಯೂ ಒಂದು ಉಚ್ಚ ಧ್ಯೇಯವನ್ನು ಸಾಧಿಸಿದಂತಾಗುವುದಿಲ್ಲವೆ? ಕಥಾಜಗತ್ತು ಅಂತಿಮವಾಗಿ ಈ ಜಗತ್ತನ್ನು, ನಮ್ಮ ಜೀವನವನ್ನು ಒಂದು ಸುಂದರ ಕಥೆಯನ್ನಾಗಿಸಬೇಕು. ಆಗ ಎಲ್ಲವೂ ಸಾರ್ಥಕವಾದೀತು. ❖

### ಏಪ್ರಿಲ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧ | ಗುರುವಾರ | ಸ್ವಾಮಿ ಯೋಗಾನಂದ ಜಯಂತಿ |
| ೭ | ಬುಧವಾರ | ಏಕಾದಶಿ |
| ೨೧ | ಬುಧವಾರ | ಶ್ರೀರಾಮನವಮಿ |
| ೨೩ | ಶುಕ್ರವಾರ | ಏಕಾದಶಿ |